ವಿಜಯನಗರ ಕ್ಷೇತ್ರಕ್ಕೆ ₹150 ಕೋಟಿ ಅನುದಾನ ಬಂದರೂ ಕಾಂಗ್ರೆಸ್ ಪಕ್ಷದವರೇ ಆದ ಶಾಸಕ ಗವಿಯಪ್ಪ ಸುಳ್ಳು ಹೇಳುತ್ತಿದ್ದಾರೆ. ಇವರ ಸ್ವ ಪ್ರತಿಷ್ಠೆಗಾಗಿ ವಿಜಯನಗರ ಕ್ಷೇತ್ರ ಬಡ ಆಗುತ್ತಿದೆ. ಒಂದು ರೀತಿಯಲ್ಲಿ ಗವಿಯಪ್ಪ ಹೊಸಪೇಟೆ ಕ್ಷೇತ್ರಕ್ಕೆ ಶಾಪ ಆಗಿ ಪರಿಣಮಿಸಿದ್ದಾರೆ.
● **ಎಚ್.ಎನ್.ಎಫ್. ಮಹಮ್ಮದ್ ಇಮಾಮ್ ನಿಯಾಜಿ** ಹುಡಾ ಅಧ್ಯಕ್ಷ

ಸುದ್ದಿ ಸಿಂಚನ

ಶಾಸಕ ಗವಿಯಪ್ಪ ವಿಜಯನಗರ ಕ್ಷೇತ್ರಕ್ಕೆ ಶಾಪ: ನಿಯಾಜಿ

ಹೊಸಪೇಟೆ: ವಿಜಯನಗರ ಕ್ಷೇತ್ರದ ಶಾಸಕ ಎಚ್. ಆರ್. ಗವಿಯಪ್ಪ ಕ್ಷೇತ್ರಕ್ಕೆ ಶಾಪವಾಗಿ ಪರಿಣಮಿಸಿದ್ದಾರೆ ಎಂದು ಹುಡಾ ಅಧ್ಯಕ್ಷ ಎಚ್. ಎನ್.ಎಫ್. ಮಹಮ್ಮದ್ ಇಮಾಮ್ ನಿಯಾಜಿ ಟೀಕಿಸಿದರು. ನಗರದ ಹುಡಾ ಕಚೇರಿಯಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕ್ಷೇತ್ರಕ್ಕೆ ಅಂದಾಜು ₹150 ಕೋಟಿ ಅನುದಾನ ಬಂದರೂ ಕಾಂಗ್ರೆಸ್ ಪಕ್ಷದವರೇ ಆದ ಶಾಸಕ ಗವಿಯಪ್ಪ ಸುಳ್ಳು ಹೇಳುತ್ತಿದ್ದಾರೆ. ಇವರ ಸ್ವಪ್ರತಿಷ್ಠೆಗಾಗಿ ವಿಜಯನಗರ ಕ್ಷೇತ್ರ ಬಡ ಆಗುತ್ತಿದೆ. ಒಂದು ರೀತಿಯಲ್ಲಿ ಗವಿಯಪ್ಪ ಹೊಸಪೇಟೆ ಕ್ಷೇತ್ರಕ್ಕೆ ಶಾಪ ಆಗಿ ಪರಿಣಮಿಸಿದ್ದಾರೆ. ಪಕ್ಷದ ಕಾರ್ಯಕರ್ತರು, ಮುಖಂಡರನ್ನು ಬಿಟ್ಟು ಬಿಜೆಪಿ, ಆರ್‌ಎಸ್‌ಎಸ್ ನವರ ಜೊತೆ ಸಂಪರ್ಕ ಹೊಂದಿರುವ ಇವರಿಗೆ ಮುಂದೆ ಜನ ಪಾಠ ಕಲಿಸಲಿದ್ದಾರೆ ಎಂದರು. ನಂಜುಂಡಪ್ಪ ವರದಿ ಪ್ರಕಾರ ವಿಜಯನಗರ ಕ್ಷೇತ್ರಕ್ಕೆ ಕೆಕೆಆರ್‌ಡಿಬಿಯಿಂದ ಪ್ರತಿ ವರ್ಷ ಅನುದಾನ ಬಿಡುಗಡೆ ಆಗುತ್ತದೆ. 2023-24 ರಲ್ಲಿ ಮ್ಯಾಕ್ರೋ ಅಡಿ ₹11.07 ಕೋಟಿ, ಮುಖ್ಯಮಂತ್ರಿ ವಿವೇಚನೆಯಡಿ ₹5 ಕೋಟಿ, ಈ ಸಾಲಿನಲ್ಲಿ ಜಿಲ್ಲೆಗೆ ₹122 ಕೋಟಿ ಬಿಡುಗಡೆಯಾಗಿದೆ. ಇನ್ನು ಜಿಲ್ಲಾ ಉಸ್ತುವಾರಿ ಸಚಿವ 250 ಹಾಸಿಗೆಗಳ ಜಿಲ್ಲಾಸ್ಪತ್ರೆಗೆ ₹29 ಕೋಟಿ ಬಿಡುಗಡೆಗೆ ಜಿಲ್ಲಾಧಿಕಾರಿಗೆ ನಿರ್ದೇಶನ ನೀಡಿದ್ದಾರೆ. ಈ ಸಾಲಿನಲ್ಲಿ ಮ್ಯಾಕ್ರೋ ಅಡಿ ₹8 ಕೋಟಿ, ಮೈಕ್ರೋ ಅಡಿ ₹10 ಕೋಟಿ, ಪಂಚಾಯತ್ ರಾಜ್ ಇಲಾಖೆಯಿಂದ 2023-24ರಲ್ಲಿ ₹15 ಕೋಟಿ, ಈ ಸಾಲಿನಲ್ಲಿ ಐದು ಕೋಟಿ ರು., ಎಸ್ ಎಚ್‌ಡಿಪಿ ಅಡಿ ಈ ಸಾಲಿನಲ್ಲಿ ₹20 ಕೋಟಿ ಅನುದಾನ ನೀಡಲಾಗಿದೆ ಎಂದರು.ವಿಜಯನಗರ ಕ್ಷೇತ್ರದಲ್ಲಿ ಅಂದಾಜು ₹100 ಕೋಟಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿಲ್ಲ. ಶಿಷ್ಟಾಚಾರ ಪಾಲಿಸಿದೇ ಶಾಸಕರು ಹಲವು ವ್ಯಕ್ತಿಗಳ ಹೆಸರು ನೀಡಿ ಅವರ ನೇತೃತ್ವದಲ್ಲಿ ಪೂಜೆ ಮಾಡಲು ಹೇಳಿದ್ದಾರೆ. ಆದರೆ ಆ ವ್ಯಕ್ತಿಗಳು ಗುತ್ತಿಗೆದಾರರು ಹಾಗೂ ಅಧಿಕಾರಿಗಳಿಗೆ ಕಿರುಕುಳ ನೀಡುವ ಮೂಲಕ ಕೆಲಸ ಆರಂಭ ಆಗದಂತೆ ಆಗಿದೆ ಎಂದು ದೂರಿದರು. ತುಂಗಭದ್ರಾ ಜಲಾಶಯಕ್ಕೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ ಬಂದರೂ ವೇದಿಕೆ ಹಂಚಿಕೊಳ್ಳಲಿಲ್ಲ. ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಖಾನ್ ಸೇರಿದಂತೆ ಯಾವುದೇ ಸಚಿವರ ಜತೆ ಉತ್ತಮ ಬಾಂಧವ್ಯ ಹೊಂದಿಲ್ಲ ಎಂದರು.

ರೈತರ ಭೂಮಿ ಕಬಳಿಕೆಗೆ ವಿರೋಧ

ರಾಜ್ಯ ಸರ್ಕಾರದ ವಿರುದ್ಧ ಶ್ರೀರಾಮುಲು ವಾಗ್ದಾಳಿ | ರಾಜ್ಯಪಾಲರಿಗೆ ಮನವಿ ರವಾನೆ

ಹೊಸಪೇಟೆಯ ತಹಸೀಲ್ ಕಚೇರಿ ಎದುರು ಶುಕ್ರವಾರ ಬಿಜೆಪಿಯಿಂದ ಬೃಹತ್ ಧರಣಿ ನಡೆಯಿತು.

- ಸರ್ಕಾರದ ತಪ್ಪು ಆದೇಶದಿಂದ ಜನರು ಆತಂಕದಲ್ಲಿದ್ದಾರೆ.
- ಕೇವಲ ನೋಟಿಸ್ ಹಿಂಪಡೆದರೆ ಸಾಲದು, 1974ರ ಗೆಜೆಟ್ ರದ್ದು ಪಡಿಸಬೇಕು.
- ಕೇವಲ ಕಣ್ಣೊರೆಸುವ ತಂತ್ರ ಮಾಡುವುದು ಸರಿಯಲ್ಲ.
- ಬಿಪಿಎಲ್ ಕಾರ್ಡ್ ರದ್ದಿನಿಂದಲೂ ಲಕ್ಷಾಂತರ ಜನರಿಗೆ ತೊಂದರೆಯಾಗಿದೆ.

● **ಕನ್ನಡಪ್ರಭ ವಾರ್ತೆ** ಹೊಸಪೇಟೆ

ರೈತರ ಭೂಮಿ, ಮಠ, ಮಂದಿರ, ಶಾಲೆಗಳು ಹಾಗೂ ಸಾರ್ವಜನಿಕ ಆಸ್ತಿಗಳನ್ನು ವಕ್ಫ್ ಬೋರ್ಡ್ ಹೆಸರಿನಲ್ಲಿ ಕಬಳಿಸಲು ಹುನ್ನಾರ ನಡೆಸಿ, ರೈತರಿಗೆ ಅನ್ಯಾಯ ಮಾಡುತ್ತಿರುವ ಸರ್ಕಾರದ ಕ್ರಮವನ್ನು ವಿರೋಧಿಸಿ, ನಮ್ಮ ಭೂಮಿ, ನಮ್ಮ ಹಕ್ಕು ಅಡಿ ನಗರದ ತಹಶೀಲ್ದಾರ್ ಕಚೇರಿ ಎದುರು ಬಿಜೆಪಿ ಜಿಲ್ಲಾ ಘಟಕದಿಂದ ಶುಕ್ರವಾರ ಧರಣಿ ನಡೆಯಿತು.

ರಾಜ್ಯ ಸರ್ಕಾರ ವಕ್ಫ್ ಹೆಸರಿನಲ್ಲಿ ರೈತರ, ಮಠ, ಮಂದಿರಗಳ ಜಮೀನು ಪಡೆಯುತ್ತಿದೆ. ಈ ಜನ ವಿರೋಧಿ ನೀತಿಯನ್ನು ಖಂಡಿಸಿ ಹಾಗೂ ಬಡವರ ಅನ್ನ ಕಸಿಯುವ ಬಿಪಿಎಲ್ ಕಾರ್ಡ್ ರದ್ದು ಮಾಡುವುದನ್ನು ವಿರೋಧಿಸಿ ಸರ್ಕಾರದ ವಿರುದ್ಧ ಧರಣಿನಿರತರು ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರದತಪ್ಪುಆದೇಶದಿಂದಜನರುಆತಂಕದಲ್ಲಿದ್ದಾರೆ. ಕೇವಲ ನೋಟಿಸ್ ಹಿಂಪಡೆದರೆ ಸಾಲದು, 1974ರ ಗೆಜೆಟ್ ರದ್ದು ಪಡಿಸಬೇಕು. ಕೇವಲ ಕಣ್ಣೊರೆಸುವ ತಂತ್ರ ಮಾಡುವುದುಸರಿಯಲ್ಲ. ಬಿಪಿಎಲ್‌ಕಾರ್ಡ್‌ರದ್ದಿನಿಂದಲೂ ಲಕ್ಷಾಂತರ ಜನರಿಗೆ ತೊಂದರೆಯಾಗಿದೆ. ವಕ್ಫ್ ಹೆಸರಿನಲ್ಲಿ ರೈತರ ಆಸ್ತಿ ಕಬಳಿಕೆ, ಮುಡಾ ಹಗರಣ, ವಾಲ್ಮೀಕಿ ನಿಗಮ ಹಗರಣ ಮಾಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡಲೇ ರಾಜೀನಾಮೆ ನೀಡಬೇಕು. ಇನ್ನುಂದೆ ಯಾವುದೇ ವಕ್ಫ್ ಅದಾಲತ್ ನಡೆಸದಂತೆ ಸರ್ಕಾರಿ ಆದೇಶ ಹೊರಡಿಸಿ, ಇದಕ್ಕೆ ಸಂಬಂಧಿಸಿದ ಗೆಜೆಟ್ ಹಿಂಪಡೆಯಬೇಕು. ಕೇಂದ್ರ ಸರ್ಕಾರದ ವಕ್ಫ್ ತಿದ್ದುಪಡಿ ಕಾಯ್ದೆಗೆ ರಾಜ್ಯ ಸರ್ಕಾರ ಅಂಗೀಕಾರ ನೀಡಬೇಕು. ಎಪಿಎಲ್ ಮಾಡಿರುವ ಬಿಪಿಎಲ್ ಕಾರ್ಡ್ ಗಳನ್ನು ಮೊದಲಿನಂತೆ ಸರಿಪಡಿಸಬೇಕು ಎಂದು ಒತ್ತಾಯಿಸಿದರು.

ಮಾಜಿ ಸಚಿವ ಬಿ.ಶ್ರೀರಾಮುಲು ಮಾತನಾಡಿ, ರೈತರಿಗಾದ ಸಮಸ್ಯೆ ಇನ್ನುಂದೆ ಯಾರಿಗೂ ಆಗಬಾರದು. ಈ ಅನ್ಯಾಯ ಯಾರು ಸರಿಪಡಿಸುತ್ತಾರೆ. ಎಲ್ಲರೂ ಬೀದಿಗಿಳಿದು ಹೋರಾಟ ಮಾಡುತ್ತಿದ್ದಾರೆ. ನಮ್ಮ ರಕ್ತ ಸುರಿಸುತ್ತೇವೆ ಹೊರತು ಒಂದಿಂಚು ಭೂಮಿ ಬಿಡುವುದಿಲ್ಲ. ರೈತರಿಗೆ ಅನ್ಯಾಯ ಮಾಡಿದರೆ ಸುಮ್ಮನಿರುವುದಿಲ್ಲ. ನಮ್ಮ ತಾಳ್ಮೆ ಪರೀಕ್ಷಿಸಬೇಡಿ. ರೈತರು ಮನಸ್ಸು ಮಾಡಿದರೆ ನಿಮ್ಮ ಸರ್ಕಾರ ಉಳಿಯಲ್ಲ ಎಂದು ಎಚ್ಚರಿಸಿದರು.

ನಮ್ಮ ಕಾಲದಲ್ಲಿ ನೋಟಿಸ್ ಕೊಟ್ಟಿದ್ದರೆ ಒಂದು ದಾಖಲೆ ಕೊಡಿ. ಸುಮ್ಮನೆ ಆರೋಪ ಮಾಡಬೇಡಿ. ನೀವೇ ಎಲ್ಲ ಹಗರಣ ಮಾಡುತ್ತಿದ್ದೀರಿ. ಸರ್ಕಾರದ ಖಜಾನೆ ಖಾಲಿ ಮಾಡಿದ್ದೀರಿ. ಬಡವರ ಅನ್ನ ಕೂಡ ಕಸಿಯುತ್ತಿದ್ದೀರಿ ಎಂದು ದೂರಿದರು.

ತಹಸೀಲ್ದಾರ್‌ರ ಮೂಲಕ ರಾಜ್ಯಪಾಲರಿಗೆ ಮನವಿಪತ್ರ ರವಾನಿಸಲಾಯಿತು. ಬಿಜೆಪಿ ಜಿಲ್ಲಾಧ್ಯಕ್ಷ ಚನ್ನಬಸವನಗೌಡ ಪಾಟೀಲ್, ಮುಖಂಡರಾದ ಅಯ್ಯಾಳಿ ತಿಮ್ಮಪ್ಪ, ಬಂಗಾರು ಹನುಮಂತ, ಸಿದ್ದಾರ್ಥ್ ಸಿಂಗ್, ಅಶೋಕ್ ಜೀರೆ, ಬಲ್ಲಾಹುಣ್ಸಿ ರಾಮಣ್ಣ, ಜಂಬಯ್ಯ ನಾಯಕ, ಕೆ. ಎಸ್.ರಾಘವೇಂದ್ರ, ಸಾಲಿಸಿದ್ದಯ್ಯಸ್ವಾಮಿ, ಟಿ.ನಾಗರಾಜ ಸಂಜೀವರೆಡ್ಡಿ, ಕಿಚಿಡಿ ಕೊಟ್ರೇಶ್, ರೇವಣಸಿದ್ದಪ್ಪ, ಕಾಸಟ್ಟಿ ಉಮಾಪತಿ, ದ್ವಾರಕೀಶ್ ಮತ್ತಿತರರಿದ್ದರು.

ಜನರು ಗ್ರಂಥಾಲಯ ಸದ್ಬಳಕೆ ಮಾಡಿಕೊಳ್ಳಲಿ: ಮೇಯರ್

● **ಕನ್ನಡಪ್ರಭ ವಾರ್ತೆ** ಬಳ್ಳಾರಿ

ಗ್ರಂಥಾಲಯದ ಪುಸ್ತಕಗಳು ಮತ್ತು ಅವುಗಳ ಮಾಹಿತಿಯು ಬಹಳ ಉಪಯುಕ್ತವಾಗಿದ್ದು, ಮಕ್ಕಳು, ವಿದ್ಯಾರ್ಥಿಗಳು ಹಾಗೂ ಎಲ್ಲಾ ಸಾರ್ವಜನಿಕರು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಮೇಯರ್‌ಮುಲ್ಲಂಗಿ ನಂದೀಶ್ ಹೇಳಿದರು.

ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ-2024ರ ಅಂಗವಾಗಿ ನಗರ ಕೇಂದ್ರ ಗ್ರಂಥಾಲಯದಲ್ಲಿ ಏರ್ಪಡಿಸಿದ್ದ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ-2024ರ ಪ್ರಶಸ್ತಿ ಪ್ರಧಾನ ಸಮಾರಂಭವನ್ನು ಡಾ.ಎಸ್.ಆರ್. ರಂಗನಾಥನ್ ಹಾಗೂ ಸರಸ್ವತಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ನಗರ ಗ್ರಂಥಾಲಯ ಪ್ರಾಧಿಕಾರದ ಸದಸ್ಯರು ಹಾಗೂ ಮಹಾನಗರ ಪಾಲಿಕೆಯ ಸದಸ್ಯೆ ಬಿ.ಜಾನಕಿ ಅವರು ಮಾತನಾಡಿದರು. ಜಿಲ್ಲಾ ಕೇಂದ್ರ ಗ್ರಂಥಾಲಯದ ಉಪ ನಿರ್ದೇಶಕಿ ಬಿ.ಕೆ. ಲಕ್ಷ್ಮಿ ಕಿರಣ್ ಅಧ್ಯಕ್ಷತೆ ವಹಿಸಿ ಮಾತನಾಡಿದರು. ನಗರ ಗ್ರಂಥಾಲಯ ಪ್ರಾಧಿಕಾರದ ಸದಸ್ಯರು ಹಾಗೂ ನಿವೃತ್ತ ಉಪನ್ಯಾಸಕ ಎನ್.ಬಸವರಾಜ ''ಆಧುನಿಕ ಯುಗದಲ್ಲಿ ಓದುವ ಸಂಸ್ಕೃತಿ'' ಕುರಿತು ವಿಶೇಷ ಉಪನ್ಯಾಸ ನೀಡಿದರು. ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ-2024ರ ನಿಮಿತ್ತ ನಗರದ ವಿವಿಧ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ''ಆಧುನಿಕ ಯುಗದಲ್ಲಿ ಗ್ರಂಥಾಲಯಗಳ ಮಹತ್ವ'' ಎಂಬ ವಿಷಯದ ಕುರಿತು ಪ್ರಬಂಧ ಸ್ಪರ್ಧೆ ಏರ್ಪಡಿಸಿ, ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿಯನ್ನು ವಿತರಿಸಲಾಯಿತು.

ಶ್ರೀಮೇಧ ಪದವಿ ಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕ ಡಾ.ಸುಮಾ.ವೈ., ನಿವೃತ್ತ ಸಬ್ ಇನ್‌ಸ್ಪೆಕ್ಟರ್ ಹುಸೇನ್ ಸಾಬ್, ಗ್ರಂಥಾಲಯ ಸಹಾಯಕ ಸಿದ್ದಪ್ಪ ಕೆ., ಸಂತೋಷ್ ಕುಮಾರ್.ಎಸ್., ಸಹ ಗ್ರಂಥಪಾಲಕ ಎಸ್ .ಟಿ.ಪ್ರಭಾಕರ್, ಗ್ರಂಥಪಾಲಕ ಆರ್.ಶಾರದ, ದ್ವಿದಸ ಡೊಳ್ಳಿನ ಮಹೇಂದ್ರ, ವಾಹನ ಚಾಲಕ ಶ್ರೀನಿವಾಸ, ಬೆರಳಚ್ಚುಗಾರ ಸಂತೋಷ್ ಸೇರಿದಂತೆ ವಿವಿಧ ಕಾಲೇಜುಗಳ ಉಪನ್ಯಾಸಕರು, ವಿದ್ಯಾರ್ಥಿಗಳು ಹಾಗೂ ಜಿಲ್ಲಾ, ನಗರ ಕೇಂದ್ರ ಗ್ರಂಥಾಲಯದ ಸಿಬ್ಬಂದಿ ಉಪಸ್ಥಿತರಿದ್ದರು.

ಬೆಳವಡಿಯ ಬೆಳಕು ಕೃತಿ ಲೋಕಾರ್ಪಣೆ

ಬಳ್ಳಾರಿಯ ಶೆಟ್ರಗುರುಶಾಂತಪ್ಪ ಕಾಲೇಜಿನಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ಸಂತೋಷ್ ಯಕ್ಕುಂಡಿ ಅವರ ಬೆಳವಡಿಯ ಬೆಳಕು ಕೃತಿ ಲೋಕಾರ್ಪಣೆಗೊಂಡಿತು.

● **ಕನ್ನಡಪ್ರಭ ವಾರ್ತೆ** ಬಳ್ಳಾರಿ

ಜೀವಪರ ಸಾಹಿತ್ಯ ಮಾತ್ರ ಓದುಗರನ್ನು ತಲುಪುತ್ತದೆ ಎಂದು ವೀರಶೈವ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಡಾ. ಆರವಿಂದ ಪಟೇಲ್ ಹೇಳಿದರು.

ಬಳ್ಳಾರಿ ಜಿಲ್ಲಾ ಕಸಾಪ ನಗರದ ಶೆಟ್ರ ಗುರುಶಾಂತಪ್ಪ ಸಂಯುಕ್ತ ಪಿಯು ಕಾಲೇಜಿನಲ್ಲಿ ಶುಕ್ರವಾರ ಆಯೋಜಿಸಿದ್ದ ಸಂತೋಷ ಯಕ್ಕುಂಡಿ ಅವರ 'ಬೆಳವಡಿಯ ಬೆಳಕು' ಕವನ ಸಂಕಲನ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ನಗರ ಕೇಂದ್ರ ಗ್ರಂಥಾಲಯದ ಅಧಿಕಾರಿ ನರಸಣ್ಣ, ಕನ್ನಡ ಸಾಹಿತ್ಯ, ಸಂಸ್ಕೃತಿ ಬೆಳೆಸುವ ನಿಟ್ಟಿನಲ್ಲಿ ಪುಸ್ತಕಗಳು ಮಹತ್ವದ ಪಾತ್ರ ವಹಿಸುತ್ತವೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಶರಣಬಸವರಾಜ್ ಮಾತಾಡಿದರು. ಕಸಾಪ ಜಿಲ್ಲಾಧ್ಯಕ್ಷ ಡಾ.ನಿಷ್ಠಿರುದ್ರಪ್ಪ ಜಿಲ್ಲೆಯಲ್ಲಿ ಕಸಾಪ ಕಾರ್ಯ ಚಟುವಟಿಕೆ ಕುರಿತು ತಿಳಿಸಿದರು. ಯುವಕವಿ ಸಂತೋಷ್ ಯಕ್ಕುಂಡಿ ಮಾತನಾಡಿ, ನನ್ನದು ಬೆಳಗಾವಿ. ಕರ್ಮಭೂಮಿ ಬಳ್ಳಾರಿಯಾಗಿದೆ. ನನ್ನ ಚೊಚ್ಚಲ ಕೃತಿ ಬಳ್ಳಾರಿಯಲ್ಲಿಯೇ ಬಿಡುಗಡೆಗೊಳ್ಳುತ್ತಿರುವುದು ಖುಷಿ ನೀಡಿದೆ ಎಂದರು. ಲೇಖಕಿ ಡಾ.ಎ.ಎನ್.ಸಿದ್ದೇಶ್ವರಿ ಕಾರ್ಯಕ್ರಮ ನಿರ್ವಹಿಸಿದರು.

ಸಾಹಿತ್ಯ ಪರಿಷತ್ತಿನ ತಾಲೂಕು ಅಧ್ಯಕ್ಷ ಕೆ.ವಿ.ನಾಗಿರೆಡ್ಡಿ, ಎಸ್‌ಜಿ ಕಾಲೇಜಿನ ಕನ್ನಡ ಉಪನ್ಯಾಸಕ ಡಾ.ಸಂಪಿಗೆ ನಾಗರಾಜ್, ನಿವೃತ್ತ ಉಪನ್ಯಾಸಕ ಟಿ.ಎಂ.ಲಿಂಗರಾಜ್, ಮಹೇಶ್, ವಿದ್ಯಾರ್ಥಿಗಳು ಇದ್ದರು.

ಕೊಂಕಣ ರೈಲ್ವೆ ನಿಗಮ ನಿಯಮಿತ
(ಭಾರತ ಸರ್ಕಾರದ ಒಂದು ಉದ್ಯಮ)
ಸಾದರ ಸೇವಾ
ಮುಕ್ತ ಇ-ಟೆಂಡರ್ ಆಹ್ವಾನಿಸುವ ಸೂಚನೆ

ಕೊಂಕಣ ರೈಲ್ವೇ ನಿಗಮ ನಿಯಮಿತದ ಪರವಾಗಿ, ಹಿರಿಯ ಪ್ರಾದೇಶಿಕ ಇಂಜಿನಿಯರ್, ಕಾರವಾರ ಅವರು **ireps.gov.in** ಪೋರ್ಟಲ್ ಮೂಲಕ ಈ ಕೆಳಗಿನ ಮುಕ್ತ ಟೆಂಡರ್‌ನ್ನು ಆಹ್ವಾನಿಸಿದ್ದಾರೆ.

ಕ್ರ ಸಂ. 1: **ಕಾಮಗಾರಿಯ ಹೆಸರು:** ಎಸ್‌ಎಸ್‌ಇ/ಪಿವೇ/ಮಡಗಾಂವ ವಿಭಾಗದ ಅಡಿಯಲ್ಲಿ ಸುರಂಗಗಳಲ್ಲಿ ಕಾಣಿಯಾದ ಫುಟ್ ಪಾತ್ ಸ್ಲಾಬ್‌ಗಳನ್ನು ಬಿತ್ತರಿಸುವುದು ಮತ್ತು ಸರಿಪಡಿಸುವುದು. (**ಟೆಂಡರ್ ಸಂಖ್ಯೆ:** KR/KW/OL/W/2023/79/RB/RT2). **ಕಾಮಗಾರಿಯ ವೆಚ್ಚ ಲಕ್ಷಗಳಲ್ಲಿ:** ರೂ. 13.45 ಲಕ್ಷಗಳು (ಜಿಎಸ್‌ಟಿ ಹೊರತುಪಡಿಸಿ). **ಟೆಂಡರ್ ಮುಕ್ತಾಯದ ದಿನಾಂಕ ಮತ್ತು ಸಮಯ:** 06/12/2024 15:00 ಗಂಟೆಗೆ.

ಕ್ರ. ಸಂ. 2: **ಕಾಮಗಾರಿಯ ಹೆಸರು:** ಕರ್ನಾಟಕ ರಾಜ್ಯ ಕೆಆರ್‌ಸಿಎಲ್ ನಲ್ಲಿ ಎಸ್‌ಎಸ್ ಇ/ಪಿ.ವೇ/ಕಾರವಾರ ವಿಭಾಗದ ಅಡಿಯಲ್ಲಿ ಪೂರ್ವ ತಯಾರಿಸಿದ ಪಾಲಿಕಾರ್ಬೋನೇಟ್ ಶೀಟ್ ಛೌಕಟ್ಟುಗಳನ್ನು ಒದಗಿಸುವ ಮೂಲಕ ಸುರಂಗಗಳಲ್ಲಿ ಸೋರುವ ನೀರನ್ನು ತಿರುಗಿಸುವುದು ಮತ್ತು ಉತ್ತಮ ಸ್ಥಿತಿಯಲ್ಲಿ ಓಎಚ್ ಇ & ಟ್ರ್ಯಾಕ್ ನಿರ್ವಹಣೆಗಾಗಿ ಎಂಎಸ್ ಫನಲ್ ವ್ಯವಸ್ಥೆಗಳು. (**ಟೆಂಡರ್ ಸಂಖ್ಯೆ:** KR/KW/OL/W/2024/25/RB/RT1). **ಕಾಮಗಾರಿಯ ವೆಚ್ಚ ಲಕ್ಷಗಳಲ್ಲಿ:** ರೂ. 32.82 ಲಕ್ಷಗಳು (ಜಿಎಸ್‌ಟಿ ಹೊರತುಪಡಿಸಿ). **ಟೆಂಡರ್ ಮುಕ್ತಾಯದ ದಿನಾಂಕ ಮತ್ತು ಸಮಯ:** 06/12/2024 15:00 ಗಂಟೆಗೆ.

ಕ್ರ. ಸಂ. 3: **ಕಾಮಗಾರಿಯ ಹೆಸರು:** ಕೆಆರ್‌ಸಿಎಲ್ ನ ಎಸ್‌ಇಎನ್ /ಉಡುಪಿ ವಿಭಾಗದ ಅಡಿಯಲ್ಲಿ ಓಎಚ್‌ಇ ಅನ್ನು ರಕ್ಷಿಸಲು ಸುರಂಗದೊಳಗೆ ನೀರಿನ ಸೋರಿಕೆ ತಿರುವು ಕಾರ್ಯಗಳನ್ನು ನಿರ್ವಹಿಸುವುದು. (ಟೆಂಡರ್ ಸಂಖ್ಯೆ: KR/KW/OL/W/2023/27/RB/RT1). **ಕಾಮಗಾರಿಯ ವೆಚ್ಚ ಲಕ್ಷಗಳಲ್ಲಿ:** ರೂ. 43.85 ಲಕ್ಷಗಳು (ಜಿಎಸ್‌ಟಿ ಹೊರತುಪಡಿಸಿ). **ಟೆಂಡರ್ ಮುಕ್ತಾಯದ ದಿನಾಂಕ ಮತ್ತು ಸಮಯ:** 06/12/2024 15:00 ಗಂಟೆಗೆ.

ಕ್ರ. ಸಂ. 4: **ಕಾಮಗಾರಿಯ ಹೆಸರು:** ಎಸ್‌ಎಸ್‌ಇ/ಪಿ.ವೇ/ಮಾಡಗಾಂವ ವಿಭಾಗದ ಅಡಿಯಲ್ಲಿ ಹಳೆಯ ಪಿಟ್-ಲೈನ್ ಮತ್ತು ಸುರಂಗಗಳಲ್ಲಿನ ಉಕ್ಕಿನ ರಚನೆಗಳಿಗೆ ಎಪಾಕ್ಸಿ ಹೇಂಟಿಂಗ್. (**ಟೆಂಡರ್ ಸಂಖ್ಯೆ:** KR/KW/OL/W/2023/83/RB/RT1). **ಕಾಮಗಾರಿಯ ವೆಚ್ಚ ಲಕ್ಷಗಳಲ್ಲಿ:** ರೂ. 7.86 ಲಕ್ಷಗಳು (ಜಿಎಸ್‌ಟಿ ಹೊರತುಪಡಿಸಿ). ಟೆಂಡರ್ ಮುಕ್ತಾಯದ ದಿನಾಂಕ ಮತ್ತು ಸಮಯ: 06/12/2024 15:00 ಗಂಟೆಗೆ.

ಕ್ರ. ಸಂ. 5: **ಕಾಮಗಾರಿಯ ಹೆಸರು:** ನಾನ್ ಸಿಟಿಆರ್ ಅಲ್ಲದ ಸ್ಥಳಗಳಲ್ಲಿ ಎಸ್‌ಎಸ್‌ಇ/ಉಡುಪಿ ವಿಭಾಗದಲ್ಲಿನ ಎಲ್ಲಾ ಪ್ರಮುಖ ಸೇತುವೆಗಳಲ್ಲಿ ಥ್ರೂ ಸ್ಲೀಪರ್ ಬದಲಿ ಮತ್ತು ಡೀಪ್ ಸ್ಕ್ರೀನಿಂಗ್. (**ಟೆಂಡರ್ ಸಂಖ್ಯೆ:** KR/KW/OL/W/2024/66/RB/RT1). **ಕಾಮಗಾರಿಯ ವೆಚ್ಚ ಲಕ್ಷಗಳಲ್ಲಿ:** ರೂ. 72.31 ಲಕ್ಷಗಳು (ಜಿಎಸ್‌ಟಿ ಹೊರತುಪಡಿಸಿ). **ಟೆಂಡರ್ ಮುಕ್ತಾಯದ ದಿನಾಂಕ ಮತ್ತು ಸಮಯ:** 06/12/2024 15:00 ಗಂಟೆಗೆ.

ಹೆಚ್ಚಿನ ವಿವರಗಳಿಗಾಗಿ, ಹಿರಿಯ ಪ್ರಾದೇಶಿಕ ಇಂಜಿನಿಯರ್ ಕಛೇರಿ, ಕೊಂಕಣ ರೈಲ್ವೇ ನಿಗಮ ನಿಯಮಿತ, ಕಾರವಾರವನ್ನು ಸಂಪರ್ಕಿಸಿ. ಹೆಚ್ಚಿನ ವಿವರಗಳಿಗಾಗಿ ಭೇಟಿ ನೀಡಿ **(https://www.ireps.gov.in)**

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್
(ಒಂದು ಷೆಡ್ಯೂಲ್ಡ್ ವಾಣಿಜ್ಯ ಬ್ಯಾಂಕ್)

ನೋಂದಾಯಿತ ಕಛೇರಿ : ದಿ ಫೇರ್‌ವೇ, ನೆಲ ಮತ್ತು ಮೊದಲನೇ ಮಹಡಿ, ಸರ್ವೆ ಸಂ. 10/1, 11/2 ಮತ್ತು 12/2ಬಿ, ದೊಮ್ಮಲೂರು ಪಕ್ಕ, ಕೋರಮಂಗಲ ಒಳ ವರ್ತ